# SRUJANI

ISSN: 2583-3510

## Indian Journal of Innovative Research and Development (SIJIRD)

Volume-1 (01), March-April 2022, Pp. 65-68
Bi-Monthly, Peer-Reviewed, Open Access, Indexed Journal
srujanifoundation@gmail.com
editor@srujani.in
www.srujani.in

# ಹೆಚ್.ಡಿ ಕೋಟೆ ತಾಲೂಕಿನ ಬುಡಕಟ್ಟು ಜನರ ಸಾಂಪ್ರದಾಯಿಕ ವೈದ್ಯಕೀಯ ಪದ್ಧತಿ: ಒಂದು ಅಧ್ಯಯನ

**ಡಾ. ರವಿಕುಮಾರ ಎಸ್***

*ಸಂಶೋದನಾ ಸಹಾಯಕರು, ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು.

***Abstract:***

ಪ್ರತಿಯೊಂದು ಜೀವಿಯು ಭೂಮಿಯ ಮೇಲೆ ಜನ್ಮತಳೆದ ನಂತರ ಒಂದಲ್ಲಾ ಒಂದು ರೋಗಕ್ಕೆ ತುತ್ತಾಗುತ್ತಿರುವುದನ್ನು ಸಮಾಜದಲ್ಲಿ ಕಾಣುತ್ತಾ ಬಂದಿದ್ದೇವೆ. ಮಾನವನು ಇಂದು ಚಿಕ್ಕಪುಟ್ಟ ಕಾಯಿಲೆಗಳು ಬಂದರೆ ಸುತ್ತ ಮುತ್ತಲ್ಲಿನ ಪರಿಸರದಲ್ಲಿ ಸಿಗುವ ಗಿಡಮೂಲಿಕೆಗಳಿಂದ ತಮ್ಮ ಆರೋಗ್ಯ ಸ್ಥಿತಿಯ ಸುಧಾರಣೆಗೆ ಹಲವಾರು ವಿಧಾನಗಳು ಹಾಗೂ ಹಲವಾರು ಚಿಕಿತ್ಸಾ ಪದ್ಧತಿಗಳ ಮೂಲಕ ಸುಧಾರಿಸಿಕೊಳ್ಳುತ್ತಿರುವುದನ್ನು ಪ್ರಸ್ತುತ ಸಮಾಜದಲ್ಲಿ ಕಾಣುತ್ತಿದ್ದೇವೆ. ಈ ಲೇಖನದಲ್ಲಿ ಹೆಚ್.ಡಿ ಕೋಟೆ ತಾಲೂಕಿನ ಬುಡಕಟ್ಟು ಜನರ ಸಾಂಪ್ರದಾಯಿಕ ವೈದ್ಯಕೀಯ ಪದ್ಧತಿ ಕುರಿತು ಅಧ್ಯಯನ ಮಾಡಲಾಗಿದೆ.

***Key Words*** ಬುಡಕಟ್ಟು, ಗಿಡಮೂಲಿಕೆ, ಸಾಂಪ್ರದಾಯಿಕ ವೈದ್ಯಕೀಯ ಪದ್ಧತಿ, ಹೆಚ್.ಡಿ ಕೋಟೆ.

**ಪೀಠಿಕೆ**

ಧರೆಯ ಮನುಷ್ಯರ ಆರೋಗ್ಯ ಸ್ಥಿತಿಯ ಸುಧಾರಣೆಯಲ್ಲಿ ಹಲವಾರು ವಿಧಾನಗಳಿವೆ ಹಾಗೂ ಹಲವಾರು ಚಿಕಿತ್ಸಾ ಪದ್ಧತಿಗಳಿವೆ. ಉದಾ: ಅಲೋಪತಿ, ಹೋಮೀಯೋಪತಿ, ಯುನಾನಿ ಹಾಗೂ ಆಯುರ್ವೇದ ಬುಡಕಟ್ಟು ಜನರ ಚಿಕಿತ್ಸೆಗೆ ಹಾಗೂ ಇನ್ನಿತರ ದೇಶಿಯ ಪದ್ಧತಿಗಳು ಬಳಕೆಯಲ್ಲಿವೆ. ಈಗ ಎಲ್ಲೆಡೆ ಅತಿ ಹೆಚ್ಚು ಪ್ರಚಲಿತದಲ್ಲಿರುವ ಆಯುರ್ವೇದ ಹಾಗೂ ಅಲೋಪತಿ ಚಿಕಿತ್ಸಾ ಪದ್ಧತಿಗಳು. ಈ ಚಿಕಿತ್ಸಾ ಪದ್ಧತಿ ಕುರಿತು ಹಲವಾರು ರೀತಿಯ ಆರೋಪಗಳಿವೆ. ಈ ಪದ್ಧತಿಗಳು ಹಿಂದೆ ಪ್ರಚಲಿತದಲ್ಲಿದ್ದ ಈ ಎಲ್ಲ ಪದ್ಧತಿಗಳನ್ನು ಕಡೆಗಣಿಸಿತು. ಇತರ ಚಿಕಿತ್ಸಾ ಪದ್ಧತಿಗಳನ್ನು ತಾತ್ಸಾರವಾಗಿ ಕಂಡು ಅವುಗಳಿಗೆ ಮೂಢನಂಬಿಕೆ ಎನ್ನುವ ಪಟ್ಟ ಕಟ್ಟಿ ಕಡೆಗಣಿಸಲಾಯಿತು. ಇವುಗಳಲ್ಲಿದ್ದ ಪ್ರಭಾವಕಾರ ಅಂಶಗಳನ್ನು ಕೂಡ ಮೂಲೆಗುಂಪು ಮಾಡಲಾಯಿತು. ಸಾಮಾನ್ಯ ಜನರೂ ದುಬಾರಿ ಎನಿಸಿರುವ ಅಲೋಪತಿ ಪದ್ಧತಿಗೆ ಮರುಳಾಗುವಂತಹ ವಾತಾವರಣವನ್ನು ನಿರ್ಮಿಸಲಾಯಿತು.

**ಬುಡಕಟ್ಟು ಜನರ ಚಿಕಿತ್ಸಾ ಪದ್ಧತಿಯ ಹಿನ್ನೆಲೆ**

ಬ್ರಿಟಿಷರ ಆಡಳಿತದಿಂದೀಚಿನ 300 ವರ್ಷದಲ್ಲಿ ಅಲೋಪತಿ ಪದ್ಧತಿಯು ಒಂದು ವ್ಯವಸ್ಥಿತವಾದ ಸಾಂಸ್ಥಿಕ ರೂಪ ಪಡೆದು ವ್ಯಾಪಾರೀಕರಣವನ್ನೇ ತನ್ನ ನೀತಿಯಾಗಿಸಿಕೊಂಡಿತು. ಇದಕ್ಕಾಗಿ ಮೆಡಿಕಲ್ ಕಾಲೇಜುಗಳು, ಆಸ್ಪತ್ರೆಗಳು, ಕ್ಲಿನಿಕ್ಕುಗಳು, ಎಂ.ಬಿ.ಬಿ.ಎಸ್ ಡಾಕ್ಟರ್‌ಗಳು, ಔಷಧಿ ಅಂಗಡಿಗಳು, ಔಷಧಿ ಉತ್ಪಾದಕ ಘಟಕಗಳು ಮತ್ತು ಮಾರಾಟಗಾರರು ಮುಂತಾದವು ಪ್ರಾರಂಭವಾದವು. ಆದರೆ ಇತ್ತೀಚಿನ ವರ್ಷಗಳಲ್ಲಿ ಪಾಶ್ಚಿಮತ್ಯ ದೇಶಗಳನ್ನೂ ಒಳಗೊಂಡತೆ ಆಲೋಪತಿ ಚಿಕಿತ್ಸಾ ಪದ್ಧತಿ ಕುರಿತು ನಿರಾಕರಣೆ ಪ್ರಾರಂಭವಾಗಿದೆ. ಮುಖ್ಯ ಕಾರಣ ಈ ಪದ್ಧತಿಯ ಚಿಕಿತ್ಸೆಯಿಂದ ಉಂಟಾಗುವ ಅಡ್ಡ ಪರಿಣಾಮಗಳು ಹೆಚ್ಚು ಹಾನಿಯನುಂಟು ಮಾಡುವಂತಹವು. ಕಾಯಿಲೆ ಎನ್ನುವುದು ಬರಿ ದೇಹ ಮತ್ತು ಮನಸ್ಸಿನ ಅಸ್ವಸ್ಥ ಸ್ಥಿತಿ ಎಂದು ಭಾವಿಸಲಾಗಿದೆ. ಆದರೆ ಅಸ್ವಸ್ಥ ಸ್ಥಿತಿ ಕಂಡು ಬರುವುದು ದೇಹದಲ್ಲೇ ಆದರೂ ಅದಕ್ಕೆ ಕಾರಣಗಳು ಬರೀ ದೇಹದ ಒಳಗೆ ಮಾತ್ರ ಇರುವುದಿಲ್ಲ. ಆದ್ದರಿಂದ ಕಾಯಿಲೆಗೆ ಕಾರಣಗಳನ್ನು ಗುರುತಿಸುವಾಗ ಸೀಮಿತವಾಗಿ ದೇಹದೊಳಗೆ ಅಥವಾ ಮನಸ್ಸಿನೊಳಗೆ ಎಂದು ಗುರುತಿಸಿ ಅಷ್ಟರ ನಿವಾರಣೆಗೆ ಮಾತ್ರ ಔಷಧೋಪಚಾರಗಳನ್ನು ಮಾಡಲಾಗುತ್ತದೆ. ಆದರೆ ಒಂದು ರೋಗಕ್ಕೆ ಕಾರಣವು ದೇಹ ಮತ್ತು ಮನಸ್ಸುಗಳನ್ನು ಮೀರಿದ ಸಾಮಾಜಿಕ ಬದುಕಿನ ಪದ್ಧತಿ, ಸಾಂಸ್ಕೃತಿಕ ನಡವಳಿಕೆ ಹಾಗೂ ನಂಬಿಕೆಗಳನ್ನು ಅವಲಂಬಿಸಿರುತ್ತದೆ ಎನ್ನುವ ಅಂಶ ಈಗ ಎಲ್ಲರಿಗೂ ಅರಿವಾಗತೊಡಗಿದೆ. ಮಾನವ

*Please cite this article as:* ರವಿಕುಮಾರ ಎಸ್. (2022). *ಹೆಚ್.ಡಿ ಕೋಟೆ ತಾಲೂಕಿನ ಬುಡಕಟ್ಟು ಜನರ ಸಾಂಪ್ರದಾಯಿಕ ವೈದ್ಯಕೀಯ ಪದ್ಧತಿ: ಒಂದು ಅಧ್ಯಯನ. ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(1), 65–68.

ಒಬ್ಬ ವ್ಯಕ್ತಿಯಲ್ಲ, ಅವನು ಒಬ್ಬ ಸಾಮಾಜಿಕ ಜೀವಿ. ಇದನ್ನು ಕಡೆಗಾಣಿಸಿ ಕೇವಲ ದೇಹಕ್ಕೆ ಮಾತ್ರ ಚಿಕಿತ್ಸೆ ನೀಡಿದರೆ ಬಹಳಷ್ಟು ಕಾಯಿಲೆಗಳು ಗುಣವಾಗುವುದಿಲ್ಲ. ಇದನ್ನು ಮನಗಂಡು ಬಹಳಷ್ಟು ಜನ ಈಗ ಪರ್ಯಾಯ ಚಿಕಿತ್ಸಾ ಪದ್ಧತಿಯ ಹುಡುಕಾಟದಲ್ಲಿದ್ದಾರೆ. ಯಾವ ಚಿಕಿತ್ಸಾ ಪದ್ಧತಿಗಳನ್ನು ಮೂಢ ನಂಬಿಕೆಗಳು ಎಂದು ದೂರ ಇಡಲಾಗಿತ್ತೊ ಅವುಗಳಲ್ಲಿ ಈಗ ರೋಗಗಳನ್ನು ಸಂಪೂರ್ಣವಾಗಿ ಗುಣಪಡಿಸುವ ಅಂಶಗಳನ್ನು ಕಾಣತೊಡಗಿದ್ದಾರೆ.

ಮೂಢ ನಂಬಿಕೆಗಳು ಎಂದು ದೂರ ಇಟ್ಟಿದ್ದ ಚಿಕಿತ್ಸಾ ಪದ್ಧತಿಗಳಲ್ಲಿ ಬುಡಕಟ್ಟು ಚಿಕಿತ್ಸಾ ಪದ್ಧತಿ ಕೂಡ ಒಂದು ಇತರೆ ತಜ್ಞರು ಈ ಪದ್ಧತಿಯನ್ನು ಒಪ್ಪದಿದ್ದರೂ ಬುಡಕಟ್ಟು ಪಂಗಡದ ಜನರು ಮಾತ್ರ ಈಗಲೂ ಇದೇ ಪದ್ಧತಿಯನ್ನು ಅನುಸರಿಸಿಕೊಂಡು ಬರುತ್ತಿದ್ದಾರೆ. ಬುಡಕಟ್ಟು ಚಿಕಿತ್ಸಾ ಪದ್ಧತಿಯಲ್ಲಿ ಹಲವಾರು ವಿಶೇಷತೆಗಳಿವೆ. ಮುಖ್ಯವಾಗಿ ಎಷ್ಟೋ ತಲೆಮಾರುಗಳ ಹಿಂದೆ ಬಳಕೆಯಲ್ಲಿದ್ದ ಪದ್ಧತಿಯು ಗುಡ್ಡರ ಮೂಲಕ ಹಿರಿಯರ ಆತ್ಮಗಳ ಜೊತೆ ಸಂವಾದ ನಡೆಸುವ ಕ್ರಿಯೆಯನ್ನು ನಡೆಸಲಾಗುವುದು. ಈ ಮೂಲಕ ಅರಣ್ಯದೊಳಗಿನ ದಟ್ಟ ಬದುಕಿನ ಎಲೆಗಳನ್ನು ಹೆಣೆಯಲಾಗುವುದು. ಆಗ ಬಳಕೆಯಲ್ಲಿದ್ದ ಗಿಡಮೂಲಿಕೆ ಹಾಗೂ ತಂತ್ರಗಾರಿಕೆಯನ್ನು ಈಗಲೂ ಬಳಸಲಾಗುವುದು. ಈ ಆಚರಣೆಯು ನಶಿಸಿ ಹೋಗುತ್ತಿರುವ ಈಗಿನ ಅತಂತ್ರ ಬದುಕಿನ ಆಸರೆಯಾಗಿ ಬೇರುಗಳನ್ನು ಆಳಕ್ಕೆ ಹೂಳುವ ಅನನ್ಯತೆ ಬೆಳೆಯುತ್ತಿದೆ.

ಬುಡಕಟ್ಟು ಜನರು ರೋಗಕ್ಕೆ ಹುಡುಕುವ ಕಾರಣಗಳು ವಿಭಿನ್ನವಾಗಿರುತ್ತವೆ. ಕಾರಣಗಳು ದೇಹದ ಒಳಗೆ ಇರುವುದಕ್ಕಿಂತ ಅವು ಸಾಮಾಜಿಕ ಜೀವನದಲ್ಲಿರುತ್ತವೆ. ಉದಾ: ಜ್ವರ ಬಂದಿರುವುದರ ಕಾರಣವು ಹರಕೆ ತೀರಿಸದೆ ಇರುವುದು, ಹಾಡಿಯ ನಿಯಮಗಳನ್ನು ಮೀರಿರುವುದು ಅಥವಾ ಸುಳ್ಳು ಹೇಳಿರುವುದು ಇರಬಹುದು. ತಮ್ಮ ದೇಹದ ಅಸ್ವಸ್ಥತೆಗಳಿಗೆ ಕಾರಣವು ಅಲೌಕಿಕವಾದದ್ದು (ಸೂಪರ್ ನ್ಯಾಚುರಲ್) ಎನ್ನುವ ನಂಬಿಕೆಗಳು ಇವೆ. ಇಂತಹ ಕಾಯಿಲೆಗಳನ್ನು ಗುಣಪಡಿಸುವುದಕ್ಕೆ ಅಲೌಕಿಕ ಶಕ್ತಿಗಳ ಜೊತೆ ವ್ಯವಹರಿಸಬೇಕಾಗುತ್ತದೆ. ಹೀಗೆ ದೈಹಿಕ ಅಸ್ವಸ್ಥತೆಗಳಿಗೆ ಬೇರೆ ಬೇರೆ ಕಾರಣಗಳಿರುವುದರಿಂದ ಆ ಕಾರಣಗಳನ್ನು ಕಂಡುಹಿಡಿದು ವಾಸಿ ಮಾಡುವುದಕ್ಕೂ ಆಯಾ ರೋಗದ ಕಾರಣಗಳ ಬಗ್ಗೆ ಪರಿಣಿತರಾಗಿರುವ ಗುಡ್ಡರುಗಳಿರುತ್ತಾರೆ. ಗುಡ್ಡರುಗಳಲ್ಲಿಯೂ ಹಲವಾರು ಸ್ತರಗಳಿರುತ್ತವೆ.

ಬಹಳಷ್ಟು ಸಾರಿ ಚಿಕಿತ್ಸಾ ವಿಧಾನವು ಪ್ರತ್ಯೇಕವಾಗಿರದೆ ಅವರ ಧಾರ್ಮಿಕ ಆಚರಣೆಗಳ ಜೊತೆಗೆ ತಳಕು ಹಾಕಿಕೊಂಡಿರುತ್ತವೆ. ಏಕೆಂದರೆ ಮನುಷ ಕೇವಲ ಒಂದು ವ್ಯಕ್ತಿಯಲ್ಲ, ಅವನು ಬುಡಕಟ್ಟಿನ ಸಾಮಾಜಿಕ ಜೀವಿ. ಸಾಮಾಜಿಕ ಆಚರಣೆಗಳು ವ್ಯಕ್ತಿಯ ಜೊತೆ ಜೊತೆಗೆ ಬೆರೆತು ಹೋಗಿರುವ ಪ್ರತ್ಯೇಕ ಗೊಳಿಸಲಾಗದ ಅಭಿವ್ಯಕ್ತಿಗಳಿರುತ್ತವೆ.

ಇತರೆ ಜನಾಂಗಕ್ಕಿಂತ ಇಂತಹ ಸಾಮಾಜಿಕ ಸಂಬಂಧವು ಬುಡಕಟ್ಟು ಜನಾಂಗಗಳಲ್ಲಿ ಹೆಚ್ಚು ನಿಕಟವಾಗಿರುತ್ತವೆ. ಆದ್ದರಿಂದಲೇ ಈ ಚಿಕಿತ್ಸಾ ವಿಧಾನವು ಕೂಡ ಇರಲಿಲ್ಲ ಹೆಚ್ಚು ಪರಿಣಾಮಕಾರಿಯಾಗಿರುತ್ತವೆ. ಆದರೂ ಕೆಲವು ಕಾಯಿಲೆಗಳಿಗಾಗಿ ಅಂದರೆ ಮುಖ್ಯವಾಗಿ ಕಾಯಿಲೆಗಳನ್ನು ಗುಣಪಡಿಸಿಕೊಳ್ಳಲು ಇತರೆ ಜನಾಂಗದವರು ಬುಡಕಟ್ಟು ಜನಾಂಗದ ಗುಡ್ಡರ ಬಳಿಯೇ ಬಂದು ಚಿಕಿತ್ಸೆ ಪಡೆದುಕೊಳ್ಳುತ್ತಿರುವ ಹಲವಾರು ಪ್ರಕರಣಗಳು ಕೂಡ ಇವೆ. ಚಿಕಿತ್ಸೆ ನೀಡುವಾಗ ಬಳಕೆಯಾಗುವ ಭಾಷೆ ಹಾಗೂ ವಸ್ತುಗಳು ವಿವಿಧ ಅರ್ಥಗಳನ್ನು ಹೊಮ್ಮಿಸುವ ಸಂಕೇತಗಳಿರುತ್ತವೆ. ಅವುಗಳನ್ನು ಆಯಾ ಸಂದರ್ಭ ಹಾಗೂ ಸನ್ನಿವೇಶಗಳಲ್ಲಿ ಅರ್ಥೈಸಿಕೊಳ್ಳಬೇಕಾಗುತ್ತದೆ.

ಗುಡ್ಡರಾಗುವ ಪ್ರಕ್ರಿಯೆಯು ಸುಲಭವಾದುದಲ್ಲ, ಅವರು ಆಯಾ ವಿಷಯಗಳಲ್ಲಿ ಪರಿಣಿತರಾಗಲು ಹಲವಾರು ರೀತಿಯ ಪರೀಕ್ಷೆಗಳಿವೆ, ದೈಹಿಕ ಶ್ರಮಕ್ಕೆ, ಮಾನಸಿಕ ಏಕಾಗ್ರತೆಗೆ ಒಳಗಾಗಬೇಕಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ವಂಶ ಪಾರಂಪರ್ಯತೆ ಹಾಗೂ ಬದ್ಧತೆಗಳು ಆತನನ್ನು ನುರಿತ ಗುಡ್ಡರನ್ನಾಗಿಸುತ್ತದೆ.

ಸಾವಿರಾರು ವರ್ಷಗಳಿಂದ ಆಚರಿಸುತ್ತಾ ಬಂದ ಚಿಕಿತ್ಸಾ ವಿಧಾನಗಳು ಈಗಲೂ ಪ್ರಸ್ತುತವಾಗಿಸಿಕೊಂಡು ಆಚರಣೆ ಮಾಡುತ್ತಿರುವ ಪದ್ಧತಿಯು ಅನನ್ಯವಾದದ್ದು. ಇಂತಹ ವಿಧಾನಗಳ ಬಗ್ಗೆ ಹೆಚ್ಚಿನ ಅಧ್ಯಯನಗಳು ಆಚರಿಸುತ್ತಿರುವ ಚಿಕಿತ್ಸಾ ಪದ್ಧತಿಗಳ ಬಗೆಗಂತೂ ಆಳವಾದ ಅಧ್ಯಯನಗಳಾಗಿಲ್ಲ.

ಕಡೆಗಣಿಸಲ್ಪಟ್ಟಿರುವ ಈ ವಿಷಯ ಕುರಿತು ಅಧ್ಯಯನವು ಹೊಸ ಹೊಸ ವಿಧಾನಗಳನ್ನು, ವಿಶೇಷ ಹೊಸಹುಳುಗಳನ್ನು ಮತ್ತು ಚಿಕಿತ್ಸಾ ಪದ್ಧತಿಗಳಿಗೆ ಹೊಸ ಆಯಾಮಗಳನ್ನು ನೀಡಬಹುದು ಎನಿಸುತ್ತದೆ. ಬುಡಕಟ್ಟು ಜನಾಂಗಗಳನ್ನು ಅವರ ಬದುಕಿನ ಎಲ್ಲಾ ಸೂಕ್ಷ್ಮತೆಗಳಲ್ಲಿ ಅರ್ಥಮಾಡಿಕೊಳ್ಳಬೇಕು ಎಂದರೆ ಅವರು ಚಿಕಿತ್ಸಾ ವಿಧಾನಗಳನ್ನು ಅಧ್ಯಯನ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಅವರನ್ನು ಸಮಗ್ರವಾಗಿ ಅರ್ಥ ಮಾಡಿಕೊಂಡಂತಾಗುವುದಿಲ್ಲ.

**ಬುಡಕಟ್ಟು ಸಮುದಾಯದ ಜನರು ಬಳಸುವ ಗಿಡಮೂಲಿಕೆಗಳ ವಿವರ**

**ನಲ್ಲಿಗಿಡ:** ಇದರ ಚಕ್ಕೆ ಅರೆದು ಕುಡಿದರೆ ಮೂತ್ರ ವಿಸರ್ಜನೆ ಮಾಡುವಾಗ ಆಗಿರುವ ಉಷ್ಣ ಕಡಿಮೆಯಾಗುತ್ತದೆ.

**ಕಾಡುಕಳ್ಳಿ ಗಿಡ:** ಇದರ ಸೊಪ್ಪು ಅರೆದು ಕುಡಿಯುವುದರಿಂದ ಹೊಟ್ಟೆ ನೋವು ಮತ್ತು ಭೇದಿ ನಿಲ್ಲಿಸಲು ಸಹಕಾರಿಯಾಗುತ್ತದೆ.

**ದಾಸಗೊಬ್ಬಳಿ:** ಪುಡಿಮಾಡಿ ಕಾಫಿಯ ಪುಡಿಯಂತೆ ಇದನ್ನು ಹಾಕಿ ಕಾಫಿಯಂತೆ ಮಾಡಿ ಕುಡಿಯಬಹುದು, ದೇಹ ತಂಪಾಗುತ್ತದೆ.

**ಆಲೆಗಿಡ:** ಆಲೆ ಬೇರಿನ ಪುಡಿಯ ಹಸಿಟ್ಟನು ಚಪಾತಿ ಥರ ಮಾಡಿ ತಿನ್ನುವುದರಿಂದ ಇದು ಕರುಳಿನ ಸಮಸ್ಯೆಯನ್ನು ನಿವಾರಿಸುತ್ತದೆ.

**ಬಿಲ್ವಾರದ ಮರ:** ಇದರ ಚಕ್ಕೆ ಅರೆದು ಕುಡಿದರೆ ರಕ್ತ ಭೇದಿ ಕಡಿಮೆಯಾಗುತ್ತದೆ.

**ಕಾರೆ ಮೆಳ:** ಬೇರನ್ನು ಅರೆದು ತಲೆಗೆ ತಿಕ್ಕಿದರೆ ತಲೆನೋವು ಹೋಗುತ್ತದೆ.

**ಅರಳೆಕಾಯಿ ಮರ:** ಇದರ ಕಾಯಿಯನ್ನು ಬೆಳ್ಳುಳಿ ಸೇರಿಸಿ ಅರೆದು ತಲೆಗೆ ಹಚ್ಚಿದರೆ ತಲೆನೋವು ವಾಸಿಯಾಗುತ್ತದೆ.

**ಹಾಲು ಕೊಟಿಗೆ ಗಿಡ:** ದವಡೆ ಹುಣ್ಣಾದಾಗ ಇದರ ಬೇರನ್ನು ಅರೆದು ಹಚ್ಚುತ್ತಾರೆ.

**ಕೊತ್ತುಳ್ಳಿಪಟ್ಟು:** ಗಿರಿಜನರು ಈ ಹಿಂದೆ ಕಾಡಿನಲ್ಲಿ ವಾಸಿಸುತ್ತಿದ್ದು ನೀರು ಸಿಗದಿದ್ದಾಗ ಈ ಹಂಬನ್ನು ಹುಡಿಕೊಂಡು ಹೋಗಿ ಹಂಬನ್ನು ಕತ್ತರಿಸಿ ಒಳಗೆ ಇದ್ದ ನೀರನ್ನು ಕುಡಿಯುತ್ತಿದ್ದರು.

**ಮಂಡಿಸೀಗೆ ಚಿಗುರು:** ಮಂಡಿಸೀಗೆ ಚಿಗುರು ಭಂಗಿಸೊಪ್ಪು ಇವುಗಳನ್ನು ಅರೆದು ರಾಗಿಯಲ್ಲಿ ಕಲಸಿ ಕೋಳಿಗೆ ತಿನ್ನಿಸಿದರೆ ಯಾವ ರೋಗವು ತಗಲುವುದಿಲ್ಲ.

**ಬರಳ ಕಡ್ಡಿ ಗಿಡ:** ಇದರ ಸೊಪ್ಪನ್ನು ಅರೆದು ಒಡೆಯದೆ ಹಿಂಸೆ ಕೊಡುತ್ತಿರುವ ಕುರಕ್ಕೆ ಹಚ್ಚಿದರೆ ಬೇಗ ಒಡೆದು ವಾಸಿಯಾಗುತ್ತದೆ.

**ಕಾಸಳ್ಳಿ ಗಿಡ:** ಏಟು ಬಿದ್ದ ಜಾಗದಲ್ಲಿ ಇದರ ಹಾಲನ್ನು ಹಾಕಿದರೆ ರಕ್ತಸ್ರಾವ ನಿಲ್ಲತ್ತದೆ. ಇದರ ಒಳನಾರನ್ನು ಜಬ್ಬಿ ಸೋಸಿ ಜೀರಿಗೆ ಸಾರಿಗೆ ಹಾಕಿ ಊಟ ಮಾಡಿದರೆ ನೆಗಡಿ ತಲೆನೋವು ವಾಸಿಯಾಗುತ್ತದೆ.

**ಉಗನಿ ಹಬ್ಬು:** ಇದರ ದಪ್ಪ ಹಂಬನ್ನು ಕತ್ತರಿಸಿ ಇದರ ಹಾಲನ್ನು ತೆಗೆದುಕೊಂಡು ಕುಡಿದರೆ ಟಾಲೆಟ್ ಹೋಗುವಾಗ ರಕ್ತ ಬಿಳುತ್ತಿದ್ದರೆ ವಾಸಿಯಾಗುತ್ತದೆ.

**ಬುಗಡಿ ಗಿಡ:** ಹಲ್ಲು ನೋವಾದ ಜಾಗದಲ್ಲಿ ಇದರ ಹಾಲನ್ನು ತಾಕಿಸಿದರೆ ನೋವು ವಾಸಿಯಾಗುತ್ತದೆ.

**ಸೊಂಕೆ ಸೋಪ್ಪು:** ವಾಂತಿ ಭೇದಿ ಸಂಕಟ ಸುಸ್ತು ಇದ್ದಾಗ ಸಾಸಿವೆ ಬೆಳ್ಳುಳ್ಳಿಯ ಜೊತೆಗೆ ಸೇರಿಸಿ ಬಟ್ಟೆಯಲ್ಲಿ ಸುತ್ತಿ ಕುತ್ತಿಗೆ ಕಟ್ಟಿದರೆ ವಾಸಿಯಾಗುತ್ತದೆ. ಜೊತೆಗೆ ನಾಗದಾಳಿ ಸೊಪ್ಪನ್ನೂ ಕಟ್ಟಬೇಕು.

**ಸರದಾರಿ ಈಶ್ವರಿ– ಕೆಂಪುಸೊಪ್ಪು:** ಇದನ್ನು ಉಷ್ಣಪೂರಿತ–ಎದೆನೋವು ನಿವಾರಿಸಲು ಕುಡಿಸಬೇಕು.

**ಉತ್ತರಾಣಿ ಸೊಪ್ಪು:** ಅದರ ಬೇರು +ಬೇಲದ ಚಕ್ಕೆ ಇವರೆಡನ್ನು ಹೆರಿಗೆ ಕಷ್ಟವಾದಾಗ ಕುಡಿಸಬೇಕು.

**ವೀಳ್ಯದ ಎಲೆರಸ + ತೆಂಗಿನ ಎಣ್ಣೆ:** ತಲೆಹೊಟ್ಟು ಹೋಗಲು ಮತ್ತು ಹೊಟ್ಟೆ ಉಬ್ಬರಿಸುವಿಕೆ ನಿವಾರಣೆ.

**ಪುದೀನ:** ಕರುಳಿನ ರೋಗಕ್ಕೆ ವಾಸಿ

**ಕರಿತುಳಸಿ + ಜೇನುತುಪ್ಪ :** ಕೆಮ್ಮಿನ ನಿವಾರಣೆಗೆ

**ನಂದಿಬಟ್ಟಲು ಹೂವು ಮತ್ತು ಎದೆಹಾಲು:** ಕಣ್ಣು ನೋವು ನಿವಾರಣೆಗೆ

**ದಾಳಿಂಬೆ ಸಿಪ್ಪೆ:** ರಕ್ತ ಭೇದಿ ನಿಲ್ಲಲು

**ನಿತ್ಯ ಪುಷ್ಪ:** ಸಿಹಿಮೂತ್ರ (ಸಕ್ಕರೆ ಕಾಯಿಲೆ) ರೋಗನಿವಾರಣೆ

**ನಿತ್ಯ ಪುಷ್ಪದ ಹೂವು+ಕಾಯಿಸಿದ ಎಣ್ಣೆ ಜೇನು ತುಪ್ಪ:** ಅಸ್ತಮ ರೋಗಕ್ಕೆ ನಿವಾರಣೆ

**ಹೊನಗೊನೆ ಸೊಪ್ಪು:** ಎದೆಹಾಲು ಹೆಚ್ಚಿಸಲು ಕಣ್ಣು ಚೆನ್ನಾಗಿ ಕಾಣಿಸಲು

**ತುಂಬೆ+ಜೇನುತುಪ್ಪ:** ಬೆರಸಿ ಕುಡಿದರೆ ಮೂಲ ವ್ಯಾಧಿಗೆ ಜೀರ್ಣಶಕ್ತಿ ಚರ್ಮ ರೋಗಗಳ ನಿವಾರಣೆಗೆ, ಇಸಬು ಕಜ್ಜಿಗಳಿಗೆ ಕಜ್ಜಿ ನೋವಿಗೆ ಪರಿಹಾರ.

**ನೆಲ್ಲಿಕಾಯಿ:** ತಿಂದು ತಲೆಗೆ ಹಚ್ಚಿದರೆ ತಂಪಾಗುತ್ತದೆ.

**ಹುಳಿದಾಸವಾಳದ ಹೂವು:** ಬಿಳಿಸೆರಗು ನಿಲ್ಲಲು.

**ಉದುರುಂಜಿ:** ಕಡಜ ಕಡಿದಾಗ ಇದನ್ನು ಅರೆದ ಕಡಿದ ಜಾಗಕ್ಕೆ ಹಾಕುವುದು.

**ತರಿಮಾರಿ:** ಕಜ್ಜಿಗೆ ಅರೆದು ಹಾಕುವುದು.

**ಹಾಲುಂಡಿ:** ಮೈ ಕೈ ನೋವು ಬಂದಾಗ ಇದನ್ನು ಅಕ್ಕಿ ಜೊತೆಯಲ್ಲಿ ಸಮನಾಗಿ ತಿನ್ನುವುದು.

**ನೀಲಗಿರಿ ಕುಡಿ:** ತಲೆನೋವು ಬಂದಾಗ ಅರೆದು ಹಚ್ಚಬೇಕು.

**ಕಾಯಿಸುಂಡೆ:** ಕೆಮ್ಮು ಹತ್ತಿದಾಗ ನೆತ್ತಿಗೆ ಬುಳೆ ಕಾಯಿ ಸವರುವುದು.

**ರೋಜ ಗಿಡ:** ಕಣ್ಣು ನೋವು ಬಂದಾಗ ಇದರ ರಸವನ್ನು ಕಣ್ಣಿಗೆ ಹಾಕಬೇಕು.

**ಗಂಧದ ಚಕ್ಕೆ:** ಗದ್ದಮಾರಿ ಬಂದಾಗ ಕನ್ನೆಗೆ ಸವರಬೇಕು.

**ಎಕ್ಕದ ಹಾಲು:** ಮುಳ್ಳು ಚುಚ್ಚಿದಾಗ ಕಾಲಿಗೆ ಹಾಕಿದರೆ ಮುಳ್ಳು ಹೊರಕ್ಕೆ ಬರುತ್ತದೆ.

**ಗಣಿಕೆ ಸೊಪ್ಪು:** ಕೆಮ್ಮು ಬಂದಾಗ ಬೇಯಿಸಿ ತಿನ್ನಬೇಕು.

**ಸಸಬಿ:** ಕಿವಿ ನೋವು ಬಂದಾಗ ಅರೆದು ರಸ ಹಾಕಬೇಕು.

**ತೊಂಡೆ ಹಂಬು:** ಎತ್ತಿನ ಹೆಗಲಲ್ಲಿ ಗಾಯವಾದಾಗ ತೇಯ್ದು ಹಾಕುವುದು.

**ಅರೆ ನೆಲ್ಲಿ:** ಕಾಮಾಲೆ ರೋಗ ಬಂದಾಗ.

**ಉಳಿಕಿನ ಹಂಬು:** ಉಳುಕಿದ ಜಾಗದಲ್ಲಿ ಈ ಹಂಬನ್ನು ಕಟ್ಟಬೇಕು.

**ಅತ್ತಿಮರ:** ಈ ಮರದ ಹಾಲನ್ನು ಮಕ್ಕಳಿಗೆ ರಕ್ತ ಭೇದಿಯಾದಾಗ ಕುಡಿಸಬೇಕು.

**ಜನವ ಸೋಪ್ಪು:** ದೇಹದಲ್ಲಿ ಉಷ್ಣಾಂಶ ಜಾಸ್ತಿ ಇದ್ದರೆ ರಾತ್ರಿ ಬೇಯಿಸಿ ಬೆಳಗ್ಗೆ ಎದ್ದು ತಿನ್ನಬೇಕು.

**ಆಲೆಗಿಡ:** ಕಾಲಿಗೆ ಇಸಬಾಗಿದ್ದಾಗ ಕೊಬ್ಬರಿ ಎಣ್ಣೆಯಲ್ಲಿ ಅರೆದು ಹಾಕಬೇಕು, ಅಲ್ಲದೇ ಹಲ್ಲು ನೋವಿಗೆ ಇದರ ಹಾಲು ಹಾಕುವುದು.

**ಮುಟ್ಟಿದರೆ ಮುನಿ:** ಇದರ ಎಲೆಯನ್ನು ಅರೆದು ಕಣ್ಣಿಗೆ ಹಾಕಿದರೆ ಒಳ್ಳೆ ನಿದ್ದೆ ಬುರುತ್ತದೆ.

**ಕೆಂಬಾರೆ ಬೇರು:** ತಾಯಿತಕ್ಕೆ ಸಿಕ್ಕಿಸಬೇಕು ಹಾಗೂ ಮಗುವಿಗೆ ಸವರಿದರೆ ಕೆಮ್ಮು ವಾಸಿಯಾಗುತ್ತದೆ.

**ಒಂದೆಲಗದ ಸಾರು:** ಇದರ ಚಟ್ನಿ ತಿಂದರೆ ದೇಹದಲ್ಲಿ ರೋಗ ತಡೆಗಟ್ಟುವ ಶಕ್ತಿ ವೃದ್ಧಿಸುತ್ತದೆ. ಸಕ್ಕರೆ ಕಾಯಿಲೆ ಬಾರದಂತೆ ತಡೆಗಟ್ಟುವ ಶಕ್ತಿ ಇದೆ.

**ಕರಿಕಡ್ಡಿ ಮೆಳೆ ಬೇರು:** ಇದರ ಬೇರನ್ನು ಹುಲ್ಲುರಿಯ ತಾಯಿ ಹುಲ್ಲುರಿಯನ್ನು ಕಂಡು ಹಿಡಿದು ಅದನ್ನು ಸ್ವಲ್ಪ ಕೆದಕಿ ಸವರಿದರೆ ಪೂರ್ತಿ ವಾಸಿಯಾಗುತ್ತದೆ.

**ತುಳುಸಿ, ಎಲೆ, ಮೆಣಸು,** ಬೆಲ್ಲ ಸೇರಿಸಿ ತಿಂದರೆ ಕೆಮ್ಮಲು ವಾಸಿಯಾಗುತ್ತದೆ.

**ಹರಳು ಗಿಡದ ಎಲೆ:** ಇದನ್ನು ನೀರಿನಲ್ಲಿ ತೊಳೆದು ಎಣ್ಣೆ ಸವರಿ ಬೆಂಕಿಯಲ್ಲಿ ಬಿಸಿಮಾಡಿ ನೋವಾದ ಅಥವಾ ಗಾಯವಾದ ಜಾಗಕ್ಕೆ ಒಂದು ದಿನ ಕಟ್ಟಿದರೆ ವಾಸಿಯಾಗುತ್ತದೆ.

**ಬಸರಿ ಮರ:** ಮರದ ತಿರುಳನ್ನು ಬಾಯಿಯಲ್ಲಿ ಇಠ್ತರಿಸಿದರೆ ಬಾಯಿಹುಣ್ಣು ವಾಸಿಯಾಗುತ್ತದೆ.

**ಬಿಲ್ವತ್ರೆ ಮರ:** ಮರಳ ತಿರುಳನ್ನು ಗ್ಯಾಸ್ಟ್ರಿಕ್ ಸಂಬಂಧಿಸಿದ ಕಾಯಿಲೆಗೆ ತಿನ್ನಬೇಕು ಮೈ ನೋವಿದ್ದಾಗ ತಿರುಳನ್ನೇ ಮೈಗೆ ಉಜ್ಜಬೇಕು.

**ಬಿದಿರು ಸೋಪ್ಪು:** ಬಿದಿರು ಸೊಪ್ಪನ್ನು ಅರೆದು ಕುಡಿಸಿದರೆ ಸತ್ತೆ ಬೀಳುತ್ತದೆ. ಮೂಳೆ ಮುರಿದಾಗ ಬಿದುರಿನ ಹೊರಪದರ ಹಾಗೂ ಸುಣ್ಣವನ್ನು ಜಜ್ಜಿ ಹಚ್ಚಿ ಹಚ್ಚೆ ಕಟ್ಟಿದರೆ ಮೂಳೆ ಸೇರಿಕೊಳ್ಳುತ್ತದೆ.

**ಗುಳಿಕಾಯಿ ಗಿಡ:** ಎಕ್ಕದ ಗಿಡ, ಗುಳಕಾಯಿ ಹೀಚು ಮತ್ತು ಎಕ್ಕದ ಎಲೆಯ ಹಾಲು ಒಂದು ತೊಟ್ಟು ಒಳ್ಳೆಣ್ಣೆ ಸೇರಿಸಿ ಕಡೆಗಣ್ಣಿನ ಪಕ್ಕ ಹಚ್ಚಿದರೆ ದನದ ಕಣ್ಣಿನ ಬಿಳುಪು ಹೊಗುತ್ತದೆ.

**ದಾಳಿಂಬೆ ಚಿಗುರು:** ಮಕ್ಕಳು ಆರೋಗ್ಯವಂತರಾಗಲು ಒಂದು ಚಿಗುರು ದಾಳಿಂಬೆ ಹೂವನ್ನು ಮಕ್ಕಳಿಗೆ ಕಟ್ಟಬೇಕು (ಚುರುಕಾಗುತ್ತದೆ). ಮಕ್ಕಳಿಗೆ ಕೈ ಕಾಲು ಸಣ್ಣ ಆದಾಗ ಇದನ್ನು ಅರೆದು ಕುಡಿಸಬೇಕು.

**ದತ್ತೂರಿ ಎಲೆ:** ಇದರ ಎಲೆಯನ್ನು ಎಣ್ಣೆಯಲ್ಲಿ ತೇದು ತರಿಗಜ್ಜಿಗೆ ಮತ್ತು ಇಸುಬಿಗೆ ಹಚ್ಚಬೇಕು.

**ದೊಡ್ಡ ನಾಗದಾಳಿ:** ನೆಲ ಕಿರುಬ ಕಚ್ಚಿದಾಗ ಬೇರನ್ನು ಅರೆದು ಕಚ್ಚಿದ ಜಾಗಕ್ಕೆ ಹಚ್ಚಬೇಕು.

**ದೂಪದ ಮರ:** ದೊಡ್ಡವರಿಗಾಗಲಿ ಮಕ್ಕಳಿಗಾಗಲಿ ಗಾಳಿ ತಟ್ಟಿದ್ದಾಗ ಈ ಮರದ ಬೇರು ಅಥವಾ ಕಡ್ಡಿ ನಮ್ಮ ಹತ್ತಿರ ಇದ್ದರೆ ಯಾವುದೇ ಗಾಳಿ ಸೋಕುವುದಿಲ್ಲ.

**ಗಾಳಿ ಸೊಪ್ಪು:** ಮಕ್ಕಳಿಗೆ ಹೊರೇಟು ಆಗಿ ಒಂದು ದಿನ ವಾಂತಿ ಭೇದಿ ಆದಾಗ ಈ ಸೊಪ್ಪಿನಲ್ಲಿ ಹೊಗೆ ಕೊಡಬೇಕು.

**ಎಳಗದ ಮರದ ಚಕ್ಕೆ:** ಮಕ್ಕಳಿಗೆ ಶೀತವಾದಾಗ ಇದರ ಚಕ್ಕೆಯನ್ನು ಅರೆದು ರಾಗಿ ಹಿಟ್ಟಿನಲ್ಲಿ ಬೆರಸಿ ತಲೆಗೆ ಕಟ್ಟಬೇಕು.

**ಜಾಲಿ ಮರದ ಚಕ್ಕೆ:** ಜ್ವರ ಹೆಚ್ಚಾಗಿ ಹುಚ್ಚು ಹುಚ್ಚಾಗಿ ಮಾತನಾಡುತ್ತಿದ್ದರೆ ಇದರ ಚಕ್ಕೆಯನ್ನು ತೇದು ಕುಡಿಸಬೇಕು.

**ನಾಯಿಬೇಲದ ಚಕ್ಕೆ:** ಇದರ ರಸವನ್ನು ಗಾಳಿ ಸೋಕಿದಾಗ ಕುಡಿಸಬೇಕು. ಹೊಟ್ಟೆಉರಿ ಬಂದಾಗ ಇದನ್ನು ಅರೆದು ರಸವನ್ನು ಬೆಳಗ್ಗೆ ಕುಡಿಯಬೇಕು. ಇದರ ರಸವನ್ನು ತೆಗೆದು ಅನ್ನದೊಂದಿಗೆ ಗರ್ಭಿಣಿಯರು ತಿಂದರೆ ಕೆಂಬಾರ ಆಗುವುದಿಲ್ಲ.

**ಉಪಸಂಪಹಾರ**

ಜಾಗತೀಕರಣದ ಈ ಸಮಯದಲ್ಲಿ ವಿಶ್ವವೇ ಒಂದು ಹಳ್ಳಿ. ಆದರೆ ಆ ವಿಶ್ವದ ಹಳ್ಳಿಯಲ್ಲಿಯೇ ಹಲವು ಜಗತ್ತುಗಳು ನಿರ್ಮಾಣವಾಗಿವೆ. ಆ ಜಗತ್ತುಗಳಲ್ಲಿ ಬುಡಕಟ್ಟು ಸಮುದಾಯದ ಜನರನ್ನು ಅರ್ಥಮಾಡಿಕೊಳ್ಳುವುದು ಕಷ್ಟಸಾಧ್ಯವೇ ಸರಿ. ಈ ಜನರು ಇಂದಿನ ಆಧುನಿಕ ಜಗತ್ತಿನಲ್ಲಿಯೂ ಕೂಡ ಇಂಗ್ಲಿಷ್ ಔಷಧಿಗಳನ್ನು ಹಾಗೂ ಆಸ್ಪತ್ರೆಗಳಿಗೆ ಹೋಗದೆ, ತಾವು ನಂಬಿರುವ ನಂಬಿಕೆಗಳ ವಿರುದ್ಧ ನಡೆದುಕೊಳ್ಳುವುರಿಂದ ಹಲವಾರು ರೋಗರುಜಿನಿಗಳು ಬರುತ್ತವೆ. ಈ ನಂಬಿಕೆಗಳು ಇಂದಿಗೂ ಜೀವಂತವಾಗಿವೆ. ಅಲ್ಲದೆ ತಾವು ವಾಸಿಸುವ ಹಾಡಿಯ ಹಿರಿಯ ಗುಡ್ಡರುಗಳಿಂದ ತಮಗೆ ಬಂದ ಕಷ್ಟ ಸುಖಗಳನ್ನು ನಿವಾರಿಸಿಕೊಳ್ಳವುದರ ಜೊತೆಗೆ ಸಾಮಾಜಿಕ ನಂಬಿಕೆಗಳನ್ನು ಇಂದಿಗೂ ಜೀವಂತವಾಗಿ ಉಳಿಸಿ ಬೆಳಸಿಕೊಂಡು ಬರುತ್ತಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಕೃಷಿ ಸಂಪದ ವಿಶೇಷ ಸಂಚಿಕೆ. (2010). *ಹೊಸತು.* ಸಂ1 (5). ನವಕರ್ನಾಟಕ ಪಬ್ಲಿಕೇಷನ್.
- ಕ್ಷೀರಸಾಗರ (2013*). ಕಾಡಿನ ನಾಡಿ ಮಿಡಿದವರು.* ಸಮಗ್ರ ಗ್ರಾಮೀಣ ಆಶ್ರಮ, ಪು.75–97
- Basu, Salil (1994). *The State of the Art - Tribal Health in India* (in) Salil Basu (ed.) Tribal Health in India. Manak Publishers.
- Basu, Salil. (1996). *Health and Socio-cultural Correlates in Tribal Communities* (in) R.S. Mann (ed.) Tribes of India, Ongoing Challenges, M.D. Publications Pvt. Ltd.


**ವಕ್ತೃ ವಿವರ**

- ಸೋಮಣ್ಣ. ಮೊತ್ತ ಗಿರಿಜನ ಕಾಲೋನಿ
- ರಾಜಣ್ಣ. ಮಾನಿಮೂಲೆಹಾಡಿ
- ಸೋಮಮ್ಮ. ಆನೆಮಾಳಹಾಡಿ
- ಚಿಕ್ಕಬೋಮ್ಮ. ಬಿ.ಮಟಕೆರೆಹಾಡಿ
- ಮಾರ. ಬಸವನಗಿರಿ ಎ ಹಾಡಿ